ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೊ ೧ ಟ ಸ್ .

ತಾರೀಖು 21ನೇ ಜುಲೈ 1903.

ಬೆಂಗಳೂರು ಸಿಟಿ 4 ವ 5, 6 ಮತ್ತು 7ನೇ ಡಿವೀರ್ಜಗಳಿಗೆ ಇದುವರಿವಿಗೂ ಇದ್ದ ರಿಜಿಸ್ಟ್ರಾರಿಗಳನ್ನು ವಜಾ ಮಾಡಿದ್ದರಿಂದ 4 ವ 5ನೇ ಡಿವೀರ್ಜಗಳ ನಿವಾಸಿಗಳು ಜನನ ಮರಣ ಇತ್ಯಾದಿಗಳನ್ನು 2ನೇ ಡಿವೀರ್ಜ ಚಿಕ್ಕಪ್ಯಾಟೆಯಲ್ಲಿ ಇರುವ ತಾಲ್ಲೂಕು ಕಛೇರಿ ಕಟ್ಟಡದಲ್ಲಿ ಇರತಕ್ಕ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಪೋರ್ಟು ಮಾಡಬೇಕೆಂತಲೂ, ಮತ್ತು 6 ವ 7ನೇ ಡಿವೀರ್ಜಗಳ ನಿವಾಸಿಗಳು 3ನೇ ಡಿವೀರ್ಜ ಅರಳಪ್ಯಾಟೆ ಆಸ್ಪತ್ರೆಯಲ್ಲಿ ಇರುವ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಪೋರ್ಟು ಮಾಡಬೇಕೆಂತಲೂ ಇದರಿಂದ ಸಹಸ್ತ ಜನರಿಗೂ ತಿಳಿಯಪಡಿಸಿ ಇರುತ್ತೆ.

ಪಿ. ಪಲ್ಪ್, ಫ್ಲಾರ್ ಪ್ರೆಸಿಡೆಂಟ್.

ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ಬ ತಾರೀಖು 16ನೇ ಜುಲೈ 1903.

ಸರ್ವೀಸ್ ರಿಜಸ್ಟರ್‌ಗಳು ಈಗತಾನೆ ಪ್ರಿಂಟಾಗಿ ಬಂದಿರುತ್ತಾಗಿ—ಪ್ರತಿ ಬಂದಕ್ಕೆ ಅರ್ಧಾಣೆ ಮೇರೆ ಮಾರಾಟಕ್ಕೆ ಸಿದ್ಧವಾಗಿರುತ್ತವೆಂದು ಇದರಿಂದ ಪ್ರಸಿದ್ಧಪಡಿಸಿರುತ್ತೆ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ನೋಟಿಸ್.

ತಾರೀಖು 29ನೇ ಜುಲೈ 1903.

ಮೈಸೂರು ಕಿಲ್ಲೆಯಲ್ಲಿರುವ ನೇತ್ರವೈದ್ಯ ನಾರಣಪಂಡಿತರ ಹಿರೀಮಗ ನೇತ್ರವೈದ್ಯ ನಂಜುಂಡಪಂಡಿತನಾದ ನಾನು ಇದರಿಂದ ಸರ್ವರಿಗೂ ತಿಳಿಸುವುದೇನೆಂದರೆ:—

ಸೀತಾವಿಳಾಸ ಸನ್ನಿಧಾನದಿಂದ ನಮ್ಮ ತಂದೆಗಳ ಹೆಸರಿಗೆ ಬಂದು ವೃತ್ತಿಯು ಬಂದಿರುತ್ತೆ. ಈ ವೃತ್ತಿಗೆ ಸೇರಿಸ್ಥ ಸೀತಾವಿಳಾಸ ಅಗ್ರಹಾರದಲ್ಲಿನ ಬಂದು ಮನೆಯೂ, ಮತ್ತು ಇದಕ್ಕೆ ಸೇರಿದ ಎಡತೊರೆ ತಾಲ್ಲೂಕು ಗಂಧನಹಳ್ಳಿ ನಾಲಾ ಕೆಳಗೆ ಇರುವ (5) ಐದು ಎಕರೆ ಜಮೀನನ್ನು ಸಹಾ ಸದರಿ ನಾರಣಪಂಡಿತರು ಕ್ರಯ ವಗ್ಯೆರೆ ಮಾಡುವುದಕ್ಕೆ ಉದ್ಯುಕ್ತರಾಗಿರುವದಾಗಿ ವರ್ತಮಾನ ಕೇಳುತ್ತೇನೆ. ಪಿಟೋ ವೃತ್ತಿಯಲ್ಲಿ ಜ್ಯೇಷ್ಠ ಪುತ್ರನಾದ ನಾನು ಅರ್ಧ ಹಿಸ್ಸೆಗೆ ಬಾಧ್ಯನಾಗಿರುತ್ತೇನೆ. ಆದ್ದರಿಂದ ಯಾರೂ ಕ್ರಯ ವಗ್ಯೆರೆ ಮಾಡಿಕೊಳ್ಳಕೂಡದೆಂಬದಾಗಿ ತಿಳಿಯಪಡಿಸಿರುತ್ತೇನೆ.

ನೇತ್ರವೈದ್ಯ ನಂಜುಂಡಪಂಡಿತನ ರುಜು.

ಗೆಜೆಟ್ ಇನ್ಸ್ಟ್ರಾರ್.

ಮೈಸೂರ ಗೆಜೆಟ್ ಕಂಪೈಲರವರು ಇದರಿಂದ ಪ್ರಸಿದ್ಧಪಡಿಸುವದೇನೆಂದರೆ, ಪೋಷ್ಟಿಗೆ ಕಳುಹಿಸಲ್ಪಡುವ ದರೋಬಸ್ತು ಗೆಜೆಟ್ ಕಾಪಿಗಳು ಅವುಗಳು ರವಾನಿಸುವದಕ್ಕೆ ತತ್ಪೂರ್ವವೆ ಕ್ರಮವಾದ ತನಿಖೆ ಮತ್ತು ಮೊಕಾಬಿಲೆ ಮಾಡುವ ಪದ್ಧತಿಯು ಇಷ್ಟರೋಣದರಿಂದ ಸದರೀ ಕಾಪಿಗಳು ಗೈರಿವಿಲೆ ಅಥವಾ ವಿಳಾಸದಾರರುಗಳಿಗೆ ಪಾವತಿ ಆಗದೆ ಇರುವ ವಿಷಯದಲ್ಲಿ ಕಂಪೈಲರ್‌ವರ್ಜ ಜವಾಬುದಾರರಾಗಿರುವದಿಲ್ಲ ಮತ್ತು ಅಂಥಾ ಗೈರಿವಿಲೆಯಾದ ಕಾಪಿಗಳಿಗೆ ಬದಲಾಗಿ ಎರಡನೇ ಕಾಪಿಗಳು ಕೊಡಲ್ಪಡಲಾರವು.

ಮೈಸೂರ ಗೆಜೆಟ್ ಚಂದಾದಾರರು ವಗ್ಯೆರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ಹಮೂಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರಿಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀವೆ ಕಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚೆಪ್ ಮೊಹೇ ಯಾ ಕ್ವಾರ್ಟರಿಗೆ		

ದಾವಣಿಯಿ ಪ್ರಕಾರ ದರಗಳು